

# ಉಪ್ಪಿನ ಮರುಭೂಮಿಯಲ್ಲಿ ಪ್ರವಾಸಿಗರ ಜಾತ್ರೆ !

■ ಚಿತ್ರ-ಲೇಖನ:
**ದಿನೇಶ ಪಟವರ್ಧನ್**

**ಗು**ಜರಾತ್ ರಾಜ್ಯದ ಕಚ್ ಜಿಲ್ಲೆಯ ಭುಜ್ ವರ್ಷದ ನಾಲ್ಕು ತಿಂಗಳ ಕಾಲ ಹೆಚ್ಚು ಪ್ರವಾಸಿಗರನ್ನು ಸೆಳೆಯುತ್ತದೆ. ಇದಕ್ಕೆ ಮುಖ್ಯ ಕಾರಣ ವಿಶ್ವದಲ್ಲೇ ಅತ್ಯಂತ ದೊಡ್ಡ ಉಪ್ಪಿನ ಸಮುದ್ರ ಇರುವುದು ಇಲ್ಲಿಯೇ.

ಕರ್ನಾಟಕದ ಕೆಲ ಪ್ರದೇಶಗಳು ಸೇರಿದಂತೆ ದೇಶದ ಅನೇಕ ಭಾಗಗಳಲ್ಲಿ ಸಮುದ್ರದ ನೀರನ್ನು ಗದ್ದೆಗಳಲ್ಲಿ ಸಂಗ್ರಹಿಸಿ, ಇಂಗಿಸಿ ಉಪ್ಪನ್ನು ತಯಾರಿಸುವುದು ಹೊಸತಲ್ಲ. ಆದರೆ, ಭುಜ್‌ನಲ್ಲಿ ಸಮುದ್ರವೇ ಉಪ್ಪಿನ ರೂಪ ತಳೆದು ನಿಲ್ಲುತ್ತದೆ! ನಿಸರ್ಗದ ಚಮತ್ಕಾರಗಳಲ್ಲಿ ಇದೂ ಒಂದು. ನವೆಂಬರ್ ತಿಂಗಳಿಂದ ಆರಂಭವಾಗುವ 'ಉಪ್ಪಿನ ಸಮುದ್ರ'ದ ಸಡಗರವನ್ನು ಫೆಬ್ರುವರಿ ಅಂತ್ಯದವರೆಗೂ ಕಾಣಬಹುದು.

ಸಿಂಧೂ ನದಿ ತೀರದ ಈ ಪ್ರದೇಶದಲ್ಲಿ ಫೆಬ್ರುವರಿ ಬಳಿಕ ಉಷ್ಣಾಂಶ ( 50 ಡಿಗ್ರಿ) ತೀವ್ರವಾಗಿರುವುದಿಂದ ಪ್ರವಾಸಿಗರಿಗೆ ನಿರ್ಬಂಧ. ಜೊತೆಗೆ ಉಪ್ಪಿನ ಸಂಗ್ರಹ, ಸಾಗಣೆ ಕಾರ್ಯವೂ ನಡೆಯುತ್ತದೆ. ಡೆಲ್ಟಾದಿಂದ ರಣ್ಕಚ್ ಪ್ರದೇಶವನ್ನು ಸಿಂಧೂ ನದಿ ಪ್ರತ್ಯೇಕಿಸುತ್ತದೆ. ಮರಳುದಿಬ್ಬ ಮುಳ್ಳಿನ ಪೊದೆ ಸಸ್ಯಗಳಿಂದ ಕೂಡಿದ ಭೂ ಭಾಗವನ್ನು ಇಲ್ಲಿ ಕಾಣಬಹುದು. ಮಾಧ್ಯಮಗಳ ತುಂಬ ರಣಾಪ್ಕಚ್ ಹೆಸರಿನಲ್ಲಿ ಜಾಹಿರಾತುಗಳು ರಾರಾಜಿಸುತ್ತವೆ. ಪ್ರವಾಸಿಗರನ್ನು ಸೆಳೆಯಲು ರಾಜ್ಯ ಸರ್ಕಾರ ಸೇರಿದಂತೆ ಖಾಸಗಿ ಪ್ರವಾಸಿ ಸಂಸ್ಥೆಗಳೂ ಪೈಪೋಟಿ ನಡೆಸುತ್ತವೆ.

ಕಚ್ ಜಿಲ್ಲೆಯ ಥಾರ್ ಮರುಭೂಮಿ ಪ್ರದೇಶ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಸಮೀಪದಲ್ಲೇ ಇದೆ. ಇಲ್ಲಿ ಗಡಿ ಕಾವಲಿಗೆ ಸೈನಿಕ ಪಡೆಗಳನ್ನು ನಿಯೋಜಿಸಲಾಗಿದೆ. ಪ್ರಪಂಚದ ಅತಿ ದೊಡ್ಡ ಉಪ್ಪಿನ ಮರುಭೂಮಿ ಇದಾಗಿದ್ದು ದೇಶದ ಮೂಲೆ ಮೂಲೆಗಳಿಂದ ಇದರ ಸೌಂದರ್ಯ ಸವಿಯಲು ಬರುತ್ತಾರೆ.

ರಣ್ ಎನ್ನುವುದು ಹಿಂದಿ ಪದವಾಗಿದ್ದು ಮರುಭೂಮಿ ಎಂದು ಅರ್ಥ. ಈ ಹಿನ್ನೆಲೆಯಲ್ಲಿ 'ಕಚ್ ರಣ್ ಉತ್ಸವ ' ಎನ್ನುವ ಹೆಸರಿನಲ್ಲಿ ಪ್ರವಾಸಿಗರನ್ನು ಇಲ್ಲಿಗೆ ಬರಮಾಡಿಕೊಳ್ಳಲಾಗುತ್ತಿದೆ, ಸುಮಾರು 7505 ಚದರ ಕಿ.ಮಿ.( 2897 ಚದರ ಮೈಲು) ವಿಸ್ತೀರ್ಣ ಹೊಂದಿರುವ ಮರುಭೂಮಿ ವೀಕ್ಷಣೆ ನಿಜಕ್ಕೂ ಅದ್ಭುತ.

ಅರೇಬಿಯನ್ ಸಮುದ್ರದ ಚಪ್ಪಟೆ ಮರುಭೂಮಿ ಇದಾಗಿದ್ದು ಹೆಚ್ಚಿನ ಆಳವಿಲ್ಲ. 15 ಮೀಟರ್ ಎತ್ತರದಲ್ಲಿ ಲವಣಯುಕ್ತ ನೀರು ನಿಂತಿರುತ್ತದೆ. ಬಿಸಿಲಿನ ಕಾವು ಹೆಚ್ಚಿದಂತೆ ನೀರಿನ ಅಂಶ ಇಂಗಿ ಉಪ್ಪಾಗಿ ಪರಿವರ್ತನೆ ಆಗುತ್ತದೆ. ಶುದ್ಧ ಹಿಮಭರಿತ ಬಿಳಿ ಬಣ್ಣದ ಶಿಲೆಗಳಂತೆ ಕಂಗೊಳಿಸುತ್ತದೆ.

